M – 2023

Register Number :

Subject Code : **22 (NS)**

# ECONOMICS

(Kannada and English Versions)

Time : 3 Hours 15 Minutes] [Total No. of questions : 51] [Max. Marks : 100

**(Kannada Version)**

***ಸೂಚನೆಗಳು :*** *1. ಪ್ರಶ್ನೆಗಳ ಸಂಖ್ಯೆಗಳನ್ನು ಮಾರ್ಜಿನ್‌ನಲ್ಲಿ ಸ್ಪಷ್ಟವಾಗಿ ಬರೆಯಿರಿ.*

*2. ಪ್ರತಿ ಪ್ರಶ್ನೆಗೆ ಉತ್ತರವು ನಿರಂತರವಾಗಿರಬೇಕು.*

## ಭಾಗ – ಎ

I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ : **(10 × 1 = 10)**

1) ತುಷ್ಟಿಗುಣವು

a) ವಸ್ತುನಿಷ್ಠ

b) ವ್ಯಕ್ತಿನಿಷ್ಠ

c) a) ಮತ್ತು b) ಎರಡೂ

d) ಮೇಲಿನ ಯಾವುದೂ ಅಲ್ಲ

2) ಒಂದು ಆದಾನದ ಪ್ರತಿ ಘಟಕದ ಬದಲಾವಣೆಗೆ ಉತ್ಪನ್ನದಲ್ಲಾಗುವ ಬದಲಾವಣೆಯನ್ನು ಹೀಗೆನ್ನುತ್ತೇವೆ.

a) ಸೀಮಾಂತ ಉತ್ಪನ್ನ b) ಸರಾಸರಿ ಉತ್ಪನ್ನ

c) ಒಟ್ಟು ಉತ್ಪನ್ನ d) ಉತ್ಪನ್ನ

3) ಏಕರೂಪವಲ್ಲದ ಸರಕುಗಳನ್ನು ಉತ್ಪಾದಿಸುವ ಮಾರುಕಟ್ಟೆಯನ್ನು ಹೀಗೆನ್ನುವರು.

a) ಏಕಸ್ವಾಮ್ಯ b) ಸ್ವಾಮ್ಯಯುತ ಪೈಪೋಟಿ

c) ಪರಿಪೂರ್ಣ ಪೈಪೋಟಿ d) ಮೇಲಿನ ಯಾವುದೂ ಅಲ್ಲ

4) ಆರ್ಥಿಕ ನಿರ್ಣಯಗಳನ್ನು ತೆಗೆದುಕೊಳ್ಳುವ ವ್ಯಕ್ತಿಗಳು ಅಥವಾ ಸಂಸ್ಥೆಗಳೆಂದರೆ

a) ಆರ್ಥಿಕ ಚಲಕಗಳು b) ಅರ್ಥಶಾಸ್ತ್ರಜ್ಞರು

c) ಆರ್ಥಿಕ ಏಜೆಂಟರು d) ಮೇಲಿನ ಯಾವುದೂ ಅಲ್ಲ

5) ರಾಷ್ಟ್ರೀಯ ವರಮಾನದ ಅಧ್ಯಯನವು

a) ಸೂಕ್ಷ್ಮ ಅರ್ಥಶಾಸ್ತ್ರಕ್ಕೆ ಸಂಬಂಧಿಸಿದೆ

b) ಸಮಗ್ರ ಅರ್ಥಶಾಸ್ತ್ರಕ್ಕೆ ಸಂಬಂಧಿಸಿದೆ

c) ಸೂಕ್ಷ್ಮ ಮತ್ತು ಸಮಗ್ರ ಅರ್ಥಶಾಸ್ತ್ರಗಳೆರಡಕ್ಕೂ ಸಂಬಂಧಿಸಿದೆ

d) ಮೇಲಿನ ಯಾವುದೂ ಅಲ್ಲ

6) ಹಣದ ಪ್ರಮುಖ ಕಾರ್ಯ

a) ಉಳಿತಾಯ b) ವೆಚ್ಚ

c) ವಿನಿಮಯ ಮಾಧ್ಯಮ d) ಹೂಡಿಕೆ

7) ಸಾಲದ ಸುಲಭ ಲಭ್ಯತೆಯು

a) ಉಳಿತಾಯವನ್ನು ಉತ್ತೇಜಿಸುತ್ತದೆ

b) ಹೂಡಿಕೆಯನ್ನು ಉತ್ತೇಜಿಸುತ್ತದೆ

c) ಬಡ್ಡಿ ದರವನ್ನು ಉತ್ತೇಜಿಸುತ್ತದೆ

d) ಮೇಲಿನ ಯಾವುದೂ ಅಲ್ಲ

8) ದೇಶದೊಳಗೆ ಉತ್ಪಾದಿಸಲಾಗುವ ಸರಕುಗಳ ಮೇಲೆ ವಿಧಿಸುವ ಸುಂಕವನ್ನು

a) ಸೇವಾ ತೆರಿಗೆ ಎನ್ನುತ್ತೇವೆ b) ವಾರಸು ತೆರಿಗೆ (ಸುಂಕ) ಎನ್ನುತ್ತೇವೆ

c) ಅಬಕಾರಿ ಸುಂಕ ಎನ್ನುತ್ತೇವೆ d) ಆಮದು-ರಫ್ತು ಸುಂಕ ಎನ್ನುತ್ತೇವೆ

9) ಈ ಪ್ರಮಿತಿಯಲ್ಲಿ ಕರೆನ್ಸಿಗಳನ್ನು ಚಿನ್ನದ ರೂಪದಲ್ಲಿ ವ್ಯಾಖ್ಯಾನಿಸಲಾಗುತ್ತಿತ್ತು.

a) ಲೋಹ ಪ್ರಮಿತಿ b) ಬೆಳ್ಳಿ ಪ್ರಮಿತಿ

c) ಚಿನ್ನದ ಪ್ರಮಿತಿ d) ಮೇಲಿನ ಯಾವುದೂ ಅಲ್ಲ

10) ಜಗತ್ತಿನ ಇತರೆ ದೇಶಗಳು ಮತ್ತು ದೇಶಿಯ ವಾಸಿಗಳ ನಡುವೆ ಈ ವ್ಯವಹಾರಗಳನ್ನು ಸಂದಾಯ ಬಾಕಿಯು ದಾಖಲಿಸುತ್ತದೆ.

a) ಸರಕುಗಳು b) ಸೇವೆಗಳು

c) ಆಸ್ತಿಗಳು d) ಮೇಲಿನ ಎಲ್ಲವೂ

II. ಆವರಣದಲ್ಲಿರುವ ಸರಿಯಾದ ಉತ್ತರವನ್ನು ಆರಿಸಿ, ಖಾಲಿ ಬಿಟ್ಟ ಸ್ಥಳವನ್ನು ಭರ್ತಿ ಮಾಡಿ. **(5 × 1 = 5)**

(ಅಂತಿಮ, ಸರಾಸರಿ ಆದಾಯ, ಅನುಭೋಗದ ಮೇಲೆ ವೆಚ್ಚ ಮಾಡದ, ಏಪ್ರಿಲ್ 1 ರಿಂದ ಮಾರ್ಚ್ 31 ರವರೆಗೆ, RBI)

11) ಪ್ರತಿ ಘಟಕದಷ್ಟು ಸರಕನ್ನು ಮಾರಾಟ ಮಾಡಿದಾಗ ಉದ್ಯಮ ಘಟಕವು ಪಡೆಯುವ ಆದಾಯವನ್ನು ________ ಎಂದು ಕರೆಯಲಾಗುತ್ತದೆ.

12) ________ ಸರಕುಗಳು ಉತ್ಪಾದನೆಯ ಯಾವುದೇ ಮುಂದಿನ ಹಂತಗಳಲ್ಲಿ ಹಾದು ಹೋಗುವುದಿಲ್ಲ. .

13) ಭಾರತದಲ್ಲಿ ಕರೆನ್ಸಿಯನ್ನು (ನೋಟುಗಳನ್ನು) ಚಲಾವಣೆಗೆ ತರುವ ಏಕ ಮಾತ್ರ ಸಂಸ್ಥೆ ________.

14) ಉಳಿತಾಯವು ಆದಾಯದ ________ ಭಾಗವಾಗಿದೆ.

15) ಭಾರತದಲ್ಲಿ ಹಣಕಾಸಿನ ವರ್ಷವು ________ ಯಿಂದ ________ ವರೆಗಿರುತ್ತದೆ.

III. ಹೊಂದಿಸಿ ಬರೆಯಿರಿ. (5 × 1 = 5)

16)

| | A | | B |
|---|---|---|---|
| a) | ಶಿಕ್ಷಕರ ಸೇವೆ | i) | ಡರ್ಟಿ ಹೊಂದಾಣಿಕೆ |
| b) | ಸಾಮಾನ್ಯ ಲಾಭ | ii) | ಕೌಶಲ್ಯ |
| c) | ಮಾರುಕಟ್ಟೆ ಸಮತೋಲನ | iii) | ಸರಕುಗಳ ವ್ಯಾಪಾರ |
| d) | ವ್ಯಾಪಾರ ಬಾಕಿ | iv) | ಶೂನ್ಯ ಲಾಭ |
| e) | ನಿರ್ವಹಣಾ ಹೊಂದಾಣಿಕೆ | v) | QD = QS |

## ಭಾಗ – ಬಿ

IV. ಈ ಕೆಳಗಿನ **ಯಾವುದಾದರೂ ಒಂಭತ್ತು** ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 4 ವಾಕ್ಯಗಳಲ್ಲಿ ಉತ್ತರಿಸಿ : (9 × 2 = 18)

https://www.karnatakaboard.com

17) ಬಜೆಟ್ ರೇಖೆ ಮತ್ತು ಬಜೆಟ್ ಗಣದಲ್ಲಿನ ವ್ಯತ್ಯಾಸಗಳಾವುವು?

18) ಕೆಳದರ್ಜೆಯ ಸರಕುಗಳೆಂದರೇನು? ಉದಾಹರಣೆ ಕೊಡಿ.

19) ಏಕತಾನಾತ್ಮಕ ಒಲವು ಎಂದರೇನು?

20) ಅನುಭೋಗಿಯ ವರ್ತನೆಯನ್ನು ವಿವರಿಸುವ ಎರಡು ವಿಧಾನಗಳನ್ನು ತಿಳಿಸಿರಿ.

21) ಒಂದು ಉದ್ಯಮ ಘಟಕದ ಪೂರೈಕೆ ರೇಖೆಯನ್ನು ನಿರ್ಧರಿಸುವ ಎರಡು ಅಂಶಗಳನ್ನು ತಿಳಿಸಿರಿ.

22) ಸಮತೋಲನ ಬೆಲೆ ಮತ್ತು ಪ್ರಮಾಣವನ್ನು ವ್ಯಾಖ್ಯಾನಿಸಿರಿ.

23) ಏಕಸ್ವಾಮ್ಯ ಮಾರುಕಟ್ಟೆಯ ಲಕ್ಷಣಗಳನ್ನು ಬರೆಯಿರಿ.

24) ಸರಾಸರಿ ಆದಾಯ ಮತ್ತು ಸೀಮಾಂತದ ಆದಾಯದ ಅರ್ಥ ತಿಳಿಸಿರಿ.

25) ನಾಲ್ಕು ಉತ್ಪಾದನಾಂಗಗಳಾವುವು? ಅವುಗಳ ಪ್ರತಿಫಲಗಳನ್ನು ತಿಳಿಸಿರಿ.

26) ದಾಸ್ತಾನು ಮತ್ತು ಹರಿವಿನ ನಡುವಿನ ವ್ಯತ್ಯಾಸಗಳನ್ನು ತಿಳಿಸಿರಿ.

27) CRR ಮತ್ತು SLR ಗಳ ಅರ್ಥ ನೀಡಿ.

28) ಮಿತವ್ಯಯದ ವಿರೋಧಾಭಾಸದ ಅರ್ಥವನ್ನು ನೀಡಿ.

29) ಪುಕ್ಕಟೆ ಸವಾರರೆಂದರೆ ಯಾರು? ಅವರನ್ನು ಏಕೆ ಹಾಗೆ ಕರೆಯುತ್ತಾರೆ?

30) ವಿದೇಶಿ ವಿನಿಮಯ ದರ ಎಂದರೇನು?

## ಭಾಗ – ಸಿ

V. ಈ ಕೆಳಗಿನ **ಯಾವುದಾದರೂ** ಏಳು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 12 ವಾಕ್ಯಗಳಲ್ಲಿ ಉತ್ತರಿಸಿರಿ. **(7 × 4 = 28)**

31) ಮಾರುಕಟ್ಟೆ ಅರ್ಥವ್ಯವಸ್ಥೆಯ ಬಗ್ಗೆ ಟಿಪ್ಪಣಿ ಬರೆಯಿರಿ.

32) ದೀರ್ಘಾವಧಿ ವೆಚ್ಚಗಳನ್ನು ವಿವರಿಸಿರಿ.

33) ಈ ಕೆಳಗಿನ ಷರತ್ತುಗಳಡಿಯಲ್ಲಿ ಪರಿಪೂರ್ಣ ಪೈಪೋಟಿಯಲ್ಲಿ ಉದ್ಯಮ ಘಟಕದ ಲಾಭ ಗರಿಷ್ಠಗೊಳಿಸುವಿಕೆಯ ಬಗ್ಗೆ ಸಂಕ್ಷಿಪ್ತ ಟಿಪ್ಪಣಿಯನ್ನು ಬರೆಯಿರಿ.

a) P = MC

b) MC ಯು $q_0$ ನಲ್ಲಿ ಇಳಿಕೆಯಾಗುವುದಿಲ್ಲ.

34) ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ದೇಶಗಳೆರಡರಲ್ಲಿ ಸರಕಾರದ (ರಾಜ್ಯ) ಮತ್ತು ಕುಟುಂಬದ ವಲಯದ ಪಾತ್ರವನ್ನು ವಿವರಿಸಿರಿ.

35) ಬಾಹ್ಯತೆಗಳನ್ನು ಕುರಿತು ಒಂದು ಟಿಪ್ಪಣಿ ಬರೆಯಿರಿ.

36) ಯೋಜಿತವಲ್ಲದ ತಪಶೀಲು ಪಟ್ಟಿಯ ಶೇಖರಣೆ ಮತ್ತು ಕುಸಿತವನ್ನು ಉದಾಹರಣೆಯೊಂದಿಗೆ ವಿವರಿಸಿರಿ.

37) RBI ನ ಕಾರ್ಯಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ.

38) ಅನುಭೋಗ ಬಿಂಬಕವನ್ನು ಸಂಕ್ಷಿಪ್ತವಾಗಿ ವಿವರಿಸಿರಿ.

39) ಸರಕಾರದ ಮುಂಗಡಪತ್ರದ ಪಟವನ್ನು ಬರೆಯಿರಿ.

40) ಸಾರ್ವಜನಿಕ ಸಾಲವು ಹೊರೆಯಾಗುವುದೇ? ವಿವರಿಸಿರಿ.

41) ವ್ಯಾಪಾರ ಬಾಕಿಯ ಬಗ್ಗೆ ಒಂದು ಟಿಪ್ಪಣಿಯನ್ನು ಬರೆಯಿರಿ.

## ಭಾಗ – ಡಿ

VI. ಈ ಕೆಳಗಿನ **ಯಾವುದಾದರೂ ನಾಲ್ಕು** ಪ್ರಶ್ನೆಗಳಿಗೆ **ಪ್ರತಿಯೊಂದಕ್ಕೂ 20** ವಾಕ್ಯಗಳಲ್ಲಿ ಉತ್ತರಿಸಿ. **(4 × 6 = 24)**

42) ಔದಾಸೀನ್ಯ ವಕ್ರರೇಖೆಯ ಲಕ್ಷಣಗಳನ್ನು ರೇಖಾಚಿತ್ರದೊಂದಿಗೆ ವಿವರಿಸಿರಿ.

43) ಮಾರುಕಟ್ಟೆ ಪೂರೈಕೆ ರೇಖೆಯನ್ನು ರೇಖಾಚಿತ್ರದೊಂದಿಗೆ ವಿವರಿಸಿರಿ.

44) ಗೋಧಿಯ ಮಾರುಕಟ್ಟೆ ಬೇಡಿಕೆ ಮತ್ತು ಮಾರುಕಟ್ಟೆ ಪೂರೈಕೆ ರೇಖೆಗಳನ್ನು ಈ ಕೆಳಗಿನಂತೆ ಕೊಡಲಾಗಿದೆ ಎಂದುಕೊಳ್ಳೋಣ.

$q^D = 200 - P$ ಮತ್ತು $q^S = 120 + P$.

6

a) ಸಮತೋಲನ ಬೆಲೆಯನ್ನು ಕಂಡುಹಿಡಿಯಿರಿ.

b) ಸಮತೋಲನ ಬೇಡಿಕೆ ಮತ್ತು ಪೂರೈಕೆಗಳನ್ನು ಕಂಡುಹಿಡಿಯಿರಿ

c) P > ಸಮತೋಲನದ ಬೆಲೆಯಾದಾಗ, ಸಮತೋಲನ ಬೇಡಿಕೆ ಮತ್ತು ಪೂರೈಕೆಗಳನ್ನು ಕಂಡುಹಿಡಿಯಿರಿ.

d) P < ಸಮತೋಲನದ ಬೆಲೆಯಾದಾಗ, ಸಮತೋಲನ ಬೇಡಿಕೆ ಮತ್ತು ಪೂರೈಕೆಗಳನ್ನು ಕಂಡುಹಿಡಿಯಿರಿ.

45) ಏಕಸ್ವಾಮ್ಯ ಉದ್ಯಮ ಘಟಕದ ಅಲ್ಪಾವಧಿ ಸಮತೋಲನವನ್ನು ವೆಚ್ಚದ ಸರಳ ಪ್ರಕರಣದ ಸಹಾಯದಿಂದ ವಿವರಿಸಿರಿ.

46) ಸಮಗ್ರ ಆರ್ಥಿಕತೆಯ ಅನನ್ಯತೆಗಳನ್ನು ವಿವರಿಸಿರಿ.

47) ಹಣದ ಕಾರ್ಯಗಳನ್ನು ವಿವರಿಸಿರಿ. ಇದು ಹೇಗೆ ಸಾಟಿ ವಿನಿಮಯ ಪದ್ಧತಿಯ ದೋಷಗಳನ್ನು ನಿವಾರಿಸಿತು? ತಿಳಿಸಿರಿ.

48) ಚಿನ್ನದ ಪ್ರಮಿತಿಯನ್ನು ಕುರಿತು ಟಿಪ್ಪಣಿ ಬರೆಯಿರಿ.

## ಭಾಗ – ಇ

VII. ಈ ಕೆಳಗಿನ **ಯಾವುದಾದರೂ ಎರಡು** ಕಾರ್ಯಭಾರ ಮತ್ತು ನಿಯೋಜನೆ ಆಧಾರಿತ ಪ್ರಶ್ನೆಗಳಿಗೆ ಉತ್ತರಿಸಿರಿ. **(2 × 5 = 10)**

49) ಒಬ್ಬ ಅನುಭೋಗಿಯು ಎರಡು ಸರಕುಗಳನ್ನು ಅನುಭೋಗಿಸಲು ಬಯಸುತ್ತಾಳೆ. ಬಾಳೆಹಣ್ಣಿನ ಬೆಲೆ ರೂ. 5 ಮತ್ತು ಮಾವಿನಹಣ್ಣಿನ ಬೆಲೆ ರೂ. 10 ಆಗಿದ್ದು, ಅನುಭೋಗಿಯ ಆದಾಯ ರೂ. 40 ಆಗಿದೆ. ಈ ಕೆಳಗಿನವುಗಳಿಗೆ ಉತ್ತರಿಸಿ.

a) ಅನುಭೋಗಿಯು ತನ್ನ ಸಂಪೂರ್ಣ ಆದಾಯವನ್ನು ಖರ್ಚು ಮಾಡಿ ಎಷ್ಟು ಪ್ರಮಾಣದ ಬಾಳೆಹಣ್ಣುಗಳನ್ನು ಅನುಭೋಗಿಸಬಹುದು?

b) ಅನುಭೋಗಿಯು ತನ್ನ ಸಂಪೂರ್ಣ ಆದಾಯವನ್ನು ಖರ್ಚು ಮಾಡಿ ಎಷ್ಟು ಪ್ರಮಾಣದ ಮಾವಿನಹಣ್ಣುಗಳನ್ನು ಅನುಭೋಗಿಸಬಹುದು?

c) ಬಜೆಟ್ ರೇಖೆಯ ಇಳಿಜಾರು ಕೆಳಮುಖ ಅಥವಾ ಮೇಲ್ಮುಖವಾಗಿರುತ್ತದೆಯೇ?

d) ಬಜೆಟ್ ರೇಖೆಯ ಮೇಲಿನ ಎಲ್ಲಾ ಸಂಯೋಜನೆಗಳು ಅನುಭೋಗಿಯ ಆದಾಯಕ್ಕೆ ಸಮನಾಗಿರುತ್ತವೆಯೇ ಅಥವಾ ಇಲ್ಲವೇ?

e) ಒಂದು ಬಾಳೆಹಣ್ಣನ್ನು ಹೆಚ್ಚುವರಿಯಾಗಿ ಪಡೆಯಲು ಮಾವಿನಹಣ್ಣನ್ನು ಬಿಟ್ಟು ಕೊಡಬೇಕಾಗುತ್ತದೆ. ಇದು ಸರಿಯೇ?

50) ಈ ಕೆಳಗಿನ ಕೋಷ್ಟಕದಲ್ಲಿ ಕಾಣೆಯಾದ ಉತ್ಪನ್ನಗಳನ್ನು ಕಂಡುಹಿಡಿಯಿರಿ.

| Factor I | TP | MP | AP |
|---|---|---|---|
| 0 | 0 | 0 | 0 |
| 1 | 10 | — | 10 |
| 2 | 24 | — | 12 |
| 3 | 40 | 16 | 13.33 |
| 4 | — | 10 | — |
| 5 | — | 6 | 11.2 |
| 6 | 57 | 1 | 9.5 |

(ಅಂಧ ವಿದ್ಯಾರ್ಥಿಗಳಿಗೆ ಮಾತ್ರ)

TP, MP ಮತ್ತು AP ಗಳ ಅರ್ಥ ನೀಡಿ.

51) ಈ ಕೆಳಗಿನ ಯಾವುದಾದರೂ ಐದು ದೇಶಗಳನ್ನು ಮತ್ತು ಅವುಗಳ ಕರೆನ್ಸಿಗಳನ್ನು ಪಟ್ಟಿ ಮಾಡಿ.

ಯು.ಎಸ್.ಎ, ಯು.ಕೆ., ಜರ್ಮನಿ, ಜಪಾನ್, ಚೈನಾ, ಅರ್ಜಂಟೈನಾ, ಯು.ಎ.ಇ., ಬಾಂಗ್ಲಾದೇಶ, ರಷ್ಯಾ.

50) ಈ ಕೆಳಗಿನ ಕೋಷ್ಟಕದಲ್ಲಿ ಕಾಣೆಯಾದ ಉತ್ಪನ್ನಗಳನ್ನು ಕಂಡುಹಿಡಿಯಿರಿ.

| Factor I | TP | MP | AP |
|---|---|---|---|
| 0 | 0 | 0 | 0 |
| 1 | 10 | — | 10 |
| 2 | 24 | — | 12 |
| 3 | 40 | 16 | 13.33 |
| 4 | — | 10 | — |
| 5 | — | 6 | 11.2 |
| 6 | 57 | 1 | 9.5 |

**(ಅಂಧ ವಿದ್ಯಾರ್ಥಿಗಳಿಗೆ ಮಾತ್ರ)**

TP, MP ಮತ್ತು AP ಗಳ ಅರ್ಥ ನೀಡಿ.

51) ಈ ಕೆಳಗಿನ **ಯಾವುದಾದರೂ** ಐದು ದೇಶಗಳನ್ನು ಮತ್ತು ಅವುಗಳ ಕರೆನ್ಸಿಗಳನ್ನು ಪಟ್ಟಿ ಮಾಡಿ.

ಯು.ಎಸ್.ಎ, ಯು.ಕೆ., ಜರ್ಮನಿ, ಜಪಾನ್, ಚೈನಾ, ಅರ್ಜಂಟೈನಾ, ಯು.ಎ.ಇ., ಬಾಂಗ್ಲಾದೇಶ, ರಷ್ಯಾ.